O.S. 2696/2020

PW1

ದಿನಾಂಕಃ **15.07.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ **ಎಂ.ಆರ್.ಬಿ** ರವರಿಂದಃ

ನನ್ನ ಮಾವ ಬೇರುಲಾಲ್ ಮತ್ತು **1** ನೇ ಪ್ರತಿವಾದಿ ನಡುವೆ ಹಲವಾರು ವರ್ಷಗಳಿಂದ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ಮೂರು ಅಂ಼ಾಡಿಗಳು ಇರುತ್ತವೆ ಎಂದು ಹೇಳಿ ನಾನು ಬರೆಸಿಲ್ಲ. ದಾವಾ ಸ್ವತ್ತಿನಲ್ಲಿ ಒಟ್ಟು ಎರಡು ಅಂ಼ಾಡಿಗಳು ಮಾತ್ರ ಇದ್ದು ಬಾಡಿಗೆಗೆ ಕೊಟಿಟರುಲಾಗಿರುತ್ತದೆ. ದಾವಾ ಸ್ವತ್ತಿನ ತಲ ಮಹಡಿಯಲ್ಲಿ ಪಶ್ಚಿಮಭಿಮುಖ ರಸ್ತೆಗೆ ಇರುವ ಅಂಗಡಿಗಳನ್ನು ಬಾಡಿಗೆಗೆ ಕೊಟ್ಟಿರುತ್ತೇವೆ. ದಾವಾ ಸ್ವತ್ತಿನಲ್ಲಿ ಇರುವ ಬಾಡಿಗೆ ಎಂದು ಕೊಟ್ಟಿರುವ ಸ್ವತ್ತಿನ ಹಿಂಭಾಗದಲ್ಲಿ ಇರುವ ಸ್ವತ್ತಿನಲ್ಲಿ **1** ನೇ ಪ್ರತಿವಾದಿಯು ವಾಸ ಮಾಡುತ್ತಿದ್ದಾರೆ. **1** ಮತ್ತು **2** ನೇ ಪ್ರತಿವಾದಿಗಳು ದಾವಾ ಸ್ವತ್ತಿನ **1** ನೇ ಮಹಡಿಯಲ್ಲಿ ಮಾತ್ರ ವಾಸ ಮಾಡುತ್ತಿದ್ದು **2** ನೇ ಮಹಡಿಯಲ್ಲಿ ವಾಸ ಮಾಡುತ್ತಿಲ್ಲ. **2** ನೇ ಮಹಡಿಯಲ್ಲಿ ಒಂದು ರೂಂ ಮಾತ್ರ ಇದ್ದು ಅದು ಸಹ ಪ್ರತಿವಾದಿಗಳ ಸ್ವಾಧೀನ ಅನುಭವದಲ್ಲಿ ಇರುತ್ತದೆ. ನಾನು ವಾಸ ಮಾಡುತ್ತಿರುವ ಮನೆಯು ದಾವಾ ಸ್ವತ್ತಿನಿಂದ ಸುಮಾರು **100** ಅಡಿ ದೂರದಲ್ಲಿ ಇರುತ್ತದೆ. ನಾನು ವಾಸ ಮಾಡುವ ಮನೆ **4** ನೇ ಕ್ರಾಸ್ ಇದ್ದು ದಾವಾ ಸ್ವತ್ತು **5** ನೇ ಕ್ರಾಸ್ ನಲ್ಲಿ ಇರುತ್ತದೆ. ತ್ಯಾಗರಾಜ್ ಮತ್ತು ವೀಣಾ ಮತ್ತು ಬಸವರಾಜ್ ರವರು ತಲ

ಮಹಡಿಯಲ್ಲಿ ಇರುವ ಅಂಗಡಿಯಲ್ಲಿ ಬಾಡಿಗೆ ಇರುತ್ತಾರೆ ಎಂದರೆ ಸರಿಯಲ್ಲ. ಬಸವರಾಜ್ ರವರು ಮಾತ್ರ ಬಾಡಿಗೆ ಅಂಗಡಿಯನ್ನು ಖಾಲಿ ಮಾಡಿಕೊಂಡು ಹೋಗಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿ ದಿಃ**01.01.2020**ರ ಕ್ರಯ ಪತ್ರ ನೊಂದಾವಣೆ ಆದ ನಂತರ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಇರುವ ಅಂಗಡಿ ಮತ್ತು ಮಳಿಗೆಯನ್ನು ಬಸವರಾಜ್, ವೀಣಾ ಮತ್ತು ತ್ಯಾಗರಾಜ್ ರವರಿಗೆ ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ**01.01.2020**ನೇ ಕ್ರಯ ಪತ್ರ ನೊಂದಾವಣೆಗೊಳ್ಳುವ ಪೂರ್ವದಲ್ಲಿ ದಾವಾ ಸ್ವತ್ತಿನ **1**ನೇ ಮಹಡಿಯ ಮನೆಯನ್ನು **14** ಲಕ್ಷ ಹಣಕ್ಕೆ ನಾವು ಲೀಸ್ ಗೆ ಕೊಟ್ಟಿದ್ದೇವು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ **1**ನೇ ಮಹಡಿಯನ್ನು ದಿಃ**09.08.2017**ರಂದು **1**ನೇ ಪ್ರತಿವಾದಿಯ ಹೆಸರಿಗೆ ಲೀಸ್ ಮಾಡಿ ಕೊಟ್ಟಿದ್ದೇವು ಎಂದರೆ ಸರಿಯಲ್ಲ. ದಿಃ**01.01.2020**ನೇ ಇಸವಿಯ ಕ್ರಯ ಪತ್ರ ನೊಂದಾವಣೆ ನಂತರ ದಿಃ**09.08.2017**ರ ಲೀಸ್ ಡೀಡ್ ರದ್ದಾಗಿರುತ್ತದೆ ಎಂದರೆ ಸರಿ. **1**ನೇ ಪ್ರತಿವಾದಿಯು ದಾವಾ ಸ್ವತ್ತಿಗೆ ಸಂಬಂಧಿಸಿದ ದಿಃ**19.08.2017**ರ ಜಿಪಿಎ ಯನ್ನು ಸೃಷ್ಟಿಸಿರುವ ವಿಷಯ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. **1**ನೇ ಪ್ರತಿವಾದಿಯು ದಾವಾ ಸ್ವತ್ತಿಗೆ ಸಂಬಂಧಿಸಿ ಯಾವುದೇ ದಾಖಲೆಯನ್ನು ಕಾನೂನು ಭಾಹಿರವಾಗಿ ಯಾವುದೇ ದಾಖಲೆಗಳನ್ನು ಸಷ್ಟಿಸಿಕೊಳ್ಳದಿದ್ದರೂ ಸಹ ನಾನು ಈ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಾ ಸ್ವತ್ತಿನಲ್ಲಿ ಅಂಗಡಿ ಮಳಿಕೆಗಳನ್ನು ನಾನು ಸ್ವತಹ ಬಸವರಾಜ್,

ವೀಣಾ ಮತ್ತು ತ್ಯಾಗರಾಜ್ ರವರಿಗೆ ಬಾಡಿಗೆಗೆ ನಾನೇ ಕೊಟ್ಟಿರುತ್ತೇನೆ ಎಂದು ತೋರಿಸಲು ಸಂಬಂಧಿತ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿ ದಿ:**01.01.2020**ನೇ ಇಸವಿಯ ಕ್ರಯ ಪತ್ರ ಬರೆದುಕೊಟ್ಟ ನಂತರ ಯಾವುದೇ ಹಕ್ಕು, ಬಾಧ್ಯತೆ ಮತ್ತು ಸ್ವಾಧೀನತೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿ **1**ನೇ ಪ್ರತಿವಾದಿಯು **2**ನೇ ಪ್ರತಿವಾದಿಯ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿರುವ ವಿಷಯ ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿ:**19.08.2017** ರಂದು ನಾನು ಪ್ರತಿವಾದಿಗಳಿಗೆ ಬರೆದುಕೊಟಿಟರುವ ಜಿಪಿಎ ಕಾನೂನು ಬದ್ದ ಜಿಪಿಎ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-**8** ಮತ್ತು **9**ರ ರೀತಿಯ ಕ್ರಿಮಿನಲ್ ದಾಖಲೆಗಳು ಈ ಪ್ರಕರಣಕ್ಕೆ ಯಾವುದೇ ರೀತಿಯಲ್ಲಿಯೂ ಪೂರ್ವಕ ಆಗಿರುವುದಿಲ್ಲ ಆದರೂ ಸಹ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಿ:**01.01.2020**ನೇ ಇಸವಿಯಂದು ನೊಂದಾವಣೆಗೊಂಡ ಕ್ರಯ ಪತ್ರವು ನ್ಯಾಯ ಬದ್ದ ಕ್ರಯ ಪತ್ರ ಆಗಿರುತ್ತದೆ ಆದರೂ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಕಾನೂನು ಬದ್ದ ದಾಖಲೆ ಆಗಿರುತ್ತದೆ ಆದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಸಲ್ಲಿಸಿ

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಬೆಲೆ ಬಾಲುವ ಸ್ವತ್ತು ಆಗಿದ್ದರಿಂದ ಮತ್ತು ಪ್ರತಿವಾದಿಗಳಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸ್ವಾಧೀನ ಅನುಭವನ್ನು ಪಡೆಯಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಬಿಬಿಎಂಪಿ ಕಛೇರಿಗೆ ಹೋಗಿಲ್ಲ ಮತ್ತು ದಾವಾ ಸ್ವತ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಪರಿಶೀಲಿಸಿಲ್ಲ ಆದರೂ ಸಹ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಈ ಬಗ್ಗೆ ಸುಳ್ಳಾಗಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

(ಓಂಕಾರಪ್ಪ. ಆರ್.)
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.